**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 14/2026**

ಪಿ.ಡಬ್ಲುಃ 4 ಸಿಡಬ್ಲುಃ 18

| | | |
|---|---|---|
| ಸಾಕ್ಷಿಯ ಹೆಸರು | : | ಶೋಭಾ |
| ಗಂಡನ ಹೆಸರು | : | ಕೆ. ರಾಜಾ |
| ವಯಸ್ಸು | : | 36 ವರ್ಷ |
| ವೃತ್ತಿ | : | ತರಕಾರಿ ವ್ಯಾಪಾರ |
| ವಾಸಸ್ಥಳ | : | ಕಂಪ್ಲಿ |

**ಸತ್ಯಪ್ರತಿಜ್ಞೆ ಮಾಡಿದ ದಿನಾಂಕಃ 17.08.2026.**

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-**

1) ಕಂಪ್ಲಿಯ 1 ನೇ ವಾರ್ಡನಲ್ಲಿರುವ ಹುಲಿಗೆಮ್ಮ ಗುಡಿಯ ಹತ್ತಿರ ನನ್ನ ಮನೆ ಇದೆ. ಚಾಸಾ-17 ನನ್ನ ಗಂಡ. ಚಾಸಾ-19 ರಿಂದ 21 ರವರು ನನ್ನ ಮಕ್ಕಳು. ಚಾಸಾ-13 ನನಗೆ ಪರಿಚಯವಿದ್ದಾರೆ. ನಾನು ವಿ.ಸಿ ಮೂಲಕ ಈ ದಿವಸ ನೋಡುತ್ತಿರುವ ಆರೋಪಿಯ ಪರಿಚಯವಿದೆ. ಆರೋಪಿಯು ಚಾಸಾ-13 ರರ ಮಗ. ನನ್ನ ಮನೆಯಿಂದ 3 ಮನೆ ಆದ ನಂತರ ಆರೋಪಿಯ ಮನೆ ಇದೆ. ಮೃತ ಲಕ್ಷ್ಮಿ ಆರೋಪಿಯ ಹೆಂಡತಿ.

2) ಈಗ ಸುಮಾರು 6 ವರ್ಷದ ಹಿಂದೆ ಶುಕ್ರವಾರದಂದು ರಾತ್ರಿ 11 ಗಂಟೆಯ ಸಮಯದಲ್ಲಿ ನಾನು, ನನ್ನ ಗಂಡ ಮತ್ತು ಮಕ್ಕಳು ಮನೆಯ ಲೈಟ್ ಹಾಕಿಕೊಂಡು ಮನೆಯಲ್ಲಿ ಮಲಗಿದ್ದೆವು. ಬೆಳಗಿನ ಜಾವ 12.45 ರ ಸಮಯದಲ್ಲಿ ಆರೋಪಿಯು ನಮ್ಮ ಮನೆಗೆ ಬಾಗಿಲನ್ನು ಜೋರಾಗಿ ಒದ್ದು ಮನೆಯ ಬಾಗಿಲು ಮುರಿದು ಒಳಗೆ ಬಂದನು. ಆರೋಪಿಯು ನನ್ನ ಗಂಡನಿಗೆ ಅವಾಚ್ಯ ಶಬ್ದಗಳಿಂದ ಬೈದು, ತನ್ನ ಹೆಂಡತಿಯ ಜೊತೆ ಆತನು ಸಂಬಂಧ ಹೊಂದಿದ್ದಾನೆ ಎಂದು ಹೇಳಿ ಮತ್ತು ತನ್ನ ಹೆಂಡತಿ ಬೇಕೆನಲೇ ಎಂದು ಹೇಳಿ ತನ್ನ ಕೈಯಲ್ಲಿದ್ದ ಮಚ್ಚಿನಿಂದ ತಲೆಯ ಎಡಗಡೆಗೆ ಹುಬ್ಬಿನ ಮೇಲ್ಭಾಗಕ್ಕೆ ಹೊಡೆದನು. ಆದ್ದರಿಂದ ನನ ಗಂಡನಿಗೆ ರಕ್ತ ಗಾಯಆಗಿತ್ತು. ನಾವು ಕೂಗಿಕೊಂಡಾಗ ಓಣಿಯಲ್ಲಿದ್ದ ಅಕ್ಕಪಕ್ಕದ ಜನರು ನಮ್ಮ ಮನೆಗೆ ಬಳಿ ಬಂದರು. ಆಗ ಆರೋಪಿಯು ತನ್ನ ಕೈಯಲ್ಲಿದ್ದ

ಮಚ್ಚನ್ನು ಅವರಿಗೆ ತೋರಿಸಿ ಅಲ್ಲಿಂದ ಓಡಿ ಹೋದನು. ಚಾಸಾ-22 ರಿಂದ 24 ರವರು ಸಹ ನಮ್ಮ ಮನಗೆ ಬಂದಿದ್ದರು. ಅವರಿಗೆ ಆರೋಪಿಯು ಮಚ್ಚು ತೋರಿಸಿ ಓಡಿ ಹೋಗಿದ್ದ.

3) ಗಾಯಗೊಂಡಿದ್ದ ನನ್ನ ಗಂಡನನ್ನು ನಾನು ಖಾಸಗಿ ವಾಹನದಲ್ಲಿ ಕಂಪ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ಅಲ್ಲಿ ನನಗೆ ಬ್ಯಾಂಡೇಜ್ ಹಾಕಿದ್ದರು. ಅಲ್ಲಿನ ಆಸ್ಪತ್ರೆಯವರು ನನಗೆ ಬಳ್ಳಾರಿಗೆ ಹೋಗಲು ತಿಳಿಸಿದ್ದರು. ಬಳ್ಳಾರಿಗೆ ಹೋಗಲು ಆಗದೆ ಇದ್ದ ಕಾರಣ ನಾವು ಗಂಗಾವತಿಯ ಆಸ್ಪತ್ರೆಗೆ ಹೋಗಿದ್ದೆವು. ನನ್ನ ಗಂಡ ಗಂಗಾವತಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೆ. ಸದರಿ ಘಟನೆಯಾಗಿ ಸುಮಾರು 15 ದಿವಸಗಳ ನಂತರ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದರು. ಆರೋಪಿಯು ನಮ್ಮ ಮನೆಯಲ್ಲಿ ಆದ ಘಟನೆಗೂ ಮೊದಲು ತನ್ನ ಹೆಂಡತಿಯ ಮೇಲೆ ಅನುಮಾನ ಪಟ್ಟು ಮಚ್ಚಿನಿಂದ ಹೊಡೆದು ಹಲ್ಲೆ ಮಾಡಿದ ಸಂಗತಿ ಮತ್ತು ಆರೋಪಿಯ ಹೆಂಡತಿ ಮರಣ ಹೊಂದಿದ್ದ ಬಗ್ಗೆ ನಂತರ ಗೊತ್ತಾಗಿತ್ತು. ನ್ಯಾಯಾಲಯದ ಮುಂದೆ ನೋಡುತ್ತಿರುವ ಮುಮಾ-3 ಮಚ್ಚುಕತ್ತಿಯಿಂದ ಆರೋಪಿಯು ಆ ದಿವಸ ನನ್ನ ಗಂಡನ ಮೇಲೆ ಹಲ್ಲೆ ಮಾಡಿದ್ದ. ನಾನು ಈಗ ನೋಡುತ್ತಿರುವ ಕೌದಿ ಮತ್ತು ತಲೆದಿಂಬನ್ನು ಆ ದಿವಸ ರಾತ್ರಿ ನಾವು ಹಾಕಿಕೊಂಡು ಮಲಗಿದ್ದೆವು. ಅವುಗಳನ್ನು ಪೊಲೀಸರು ಜಪ್ತು ಮಾಡಿಕೊಂಡು ಹೋಗಿದ್ದರು. ಮುಮಾ-4 ಮತ್ತು 5 ಬಟ್ಟೆಗಳು ನನ್ನ ಗಂಡ ಘಟನೆ ಸಮಯದಲ್ಲಿ ತೊಟ್ಟಿದ್ದ ಬಟ್ಟೆಗಳಾಗಿವೆ.

4) ನಾನು ಮತ್ತು ಆರೋಪಿಯ ಹೆಂಡತಿ ಒಬ್ಬರ ಜೊತೆ ಒಬ್ಬರು ಮಾತನಾಡುತ್ತಿದ್ದುದರ ಸಿಟ್ಟಿನಿಂದ ಮತ್ತು ತನ್ನ ಮೇಲಿನ ಅನುಮಾನದಿಂದ ಆರೋಪಿಯು ನನ್ನ ಗಂಡನ ಮೇಲೆ ಹಲ್ಲೆ ಮಾಡಿದ್ದ.

**SC No.14/2026**
**PW-4**

ಪಾಟೀಸವಾಲು ಆರೋಪಿ ಪರವಾಗಿ ಶ್ರೀ ಎನ್.ಬಿ.ಕೆ ವಕೀಲರಿಂದಃ

**5)** ನಾನು ಮದುವೆಯಾಗಿನಿಂದ ಅಂದರೆ 20 ವರ್ಷದಿಂದ ನನ್ನ ಗಂಡನ ಮನೆಯಲ್ಲಿ ವಾಸವಿದ್ದೇನೆ. ನಾನು ಆರೋಪಿಯ ಮದುವೆಗೆ ಹೋಗಿಲ್ಲ. ನಮ್ಮ ಮನೆಯಿಂದ 3 ಮನೆ ಆದ ನಂತರ ಆರೋಪಿಯ ಮನೆ ಇದೆ. ರಾತ್ರಿ ನಾವು ಮಲಗುವಾಗಿ ಮನೆ ಬಾಗಿಲಿನ ಚಿಲಕವನು ಒಳಗಿನಿಂದ ಹಾಕಿ ಮಲಗಿದ್ದೆವು. ನಮ್ಮ ಮನೆಯ ಬಾಗಿಲಿನ ಕಟ್ಟಿಗೆಯ ಸೈಜ್ ಸಣ್ಣದಿತ್ತು. ಅದನ್ನು ಜೋರಾಗಿ ಒದ್ದಲ್ಲಿ ಮುರಿಯುವ ಸಾಧ್ಯತೆ ಇದೆ ಎಂದರೆ ಸರಿ. ಆದಿವಸ ನಮ್ಮ ಮನೆಯ ಬಾಗಿಲು ಮುರಿದಿತ್ತು ಇಲ್ಲವೋ ಗಮನಿಸಿಲ್ಲ.

**6)** ಆರೋಪಿಯ ಮನೆಯಲ್ಲಿ ಸಾವು ಆಗಿದ್ದರಿಂದ ಆರೋಪಿಯ ಮಕ್ಕಳು ಮನೆಯಲ್ಲಿ ಜೋರಾಗಿ ಕಿರುಚಾಡಿದ್ದರಿಂದ ನನ್ನ ಗಂಡ ಗಾಬರಿಗೊಂಡು ಮನೆಯಿಂದ ಹೊರಗೆ ಬರುವ ಸಮಯದಲ್ಲಿ ಬಾಗಿಲಿಗೆ ಆತನ ತಲೆ ತಗುಲಿ ನನ್ನ ಗಾಯವಾಗಿತ್ತು ಎಂದರೆ ಸರಿಯಲ್ಲ. ಆರೋಪಿಯು ಮುಮಾ-1 ಮಚ್ಚಿನಿಂದ ನನ್ನ ಗಂಡನ ತಲೆಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಮುಮಾ-1 ಮಚ್ಚನ್ನು ನಾನು ಇದೇ ಮೊದಲ ಬಾರಿಗೆ ನೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ನನಗೆ ಪರಿಚಯವಿರುವುದರಿಂದ ನಾನು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಮಾ-3 ರಿಂದ 6 ವಸ್ತುಗಳನ್ನು ನಾನು ಇದೇ ಮೊದಲು ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.